ನವೀಕರಿಸಬಹುದಾದ ಇಂಧನಗಳ ಕಾರ್ಯನೀತಿ

890 (1342); ಶ್ರೀ ಡಾ. ಅಶ್ವತ್ಥ್‌ನಾರಾಯಣ ಸಿ. ಎನ್. (ಮಲ್ಲೇಶ್ವರಂ)

(ಅ) ಕರ್ನಾಟಕ ನವೀಕರಿಸಬಹುದಾದ ಇಂಧನಗಳ ಕಾರ್ಯನೀತಿ 2009–2014ರಲ್ಲಿ ಪರಿಕಲ್ಪಿಸಿರುರವಂತೆ ನವೀಕರಿಸಬಹುದಾದ ಇಂಧನಗಳ ಸ್ಥಾಪಿತ ಸಾಮರ್ಥ್ಯದ ಗುರಿಯನ್ನು ಸಾಧಿಸುವ ದಿಶೆಯಲ್ಲಿ ಸರ್ಕಾರವು ಸೂಕ್ತ ಪ್ರಗತಿ ಸಾಧಿಸಿದೆಯೇ; ಹಾಗಿದ್ದಲ್ಲಿ ಅದರ ವಿವರಗಳನ್ನು ನೀಡುವುದು;

(ಆ) ಈ ಗುರಿಗಳ ಸಾಧನೆಯಲ್ಲಿ ಯಾವುದೇ ವಿಳಂಬ ಉಂಟಾಗಿದೆಯೇ; ಹಾಗಿದ್ದಲ್ಲಿ, ಅದರ ವಿವರ ಒದಗಿಸುವುದು;

(ಇ) 2014ರ ತರುವಾಯ ಸರ್ಕಾರವು ಇನ್ನು ಪರಿಣಾಮಕಾರಿಯಾದ ನವೀಕರಸಿಬಹುದಾದ ಇಂಧನಗಳ ಕಾರ್ಯನೀತಿಯನ್ನು ಜಾರಿಗೆ ತರುವ ಯೋಜನೆಯನ್ನು ಹೊಂದಿದೆಯೇ? (ವಿವರ ನೀಡುವುದು)

ಶ್ರೀ ಡಿ. ಕೆ. ಶಿವಕುಮಾರ್ (ಇಂಧನ ಸಚಿವರು)

(ಅ) ಕರ್ನಾಟಕ ನವೀಕರಸಿಬಹುದಾದ ಇಂಧನಗಳ ಕಾರ್ಯನೀತಿ 2009–2014ರಂತೆ ನವೀಕರಿಸಬಹುದಾದ ಇಂಧನಗಳ ಸ್ಥಾಪಿತ ಸಾಮರ್ಥ್ಯ ಮತ್ತು ಗುರಿ ಸಾಧನೆಯ ವಿವರಗಳು ಕೆಳಕಂಡಂತಿವೆ.

ನವೀಕರಿಸಬಹುದಾದ ಇಂಧನ ಮೂಲ	ಇಂಧನ ನೀತಿ 2009–14ರ ಗುರಿ (ಮೆ.ವ್ಯಾ.ನಲ್ಲಿ)	2009–14ರ ಅವಧಿಯಲ್ಲಿ ಸಾಧನೆ (ಮೆ.ವ್ಯಾ.ನಲ್ಲಿ)	ಪ್ರಸ್ತುತ ಸ್ಥಾಪಿತ ಸಾಮರ್ಥ್ಯ (ಮೆ.ವ್ಯಾ.ನಲ್ಲಿ)
ಪವನ ವಿದ್ಯುತ್	2969	998.150	2501
ಕಿರಜಲ ವಿದ್ಯುತ್	600	313.010	742

ಸಹ ವಿದ್ಯುತ್	281	612.560	103
ಜೈವಿಕ ವಿದ್ಯುತ್	300	14.590	1145
ಸೌರ ವಿದ್ಯುತ್	126	31.000	41
ಒಟ್ಟು	**4276**	**1969.310**	**4532**

(ಆ) ಹೌದು, ವಿಳಂಬಕ್ಕೆ ಕಾರಣಗಳು ಕೆಳಕಂಡಂತಿವೆ:

1. ಪವನ ಮತ್ತು ಕಿರುಜಲ ಯೋಜನೆಗಳು ಹೆಚ್ಚಾಗಿ ಪಶ್ಚಿಮ ಘಟ್ಟ ಹಾಗೂ ಅರಣ್ಯ ಪ್ರದೇಶದಲ್ಲಿ ಬರುವುದರಿಂದ ಯೋಜನೆಗಳಿಗೆ ಪರವಾನಗಿ ಸಿಗುವುದರಲ್ಲಿ ವಿಳಂಬವಾಗುತ್ತದೆ.

2. ಭೂಸುದಾರಣೆಗಳ ಕಾಯಿದೆ 109 ರ ಅಡಿಯಲ್ಲಿ ಭೂಮಿ ಖರೀದಿಸುವುದು ಹಾಗೂ ಕೃಷಿಯೇತರ ಉದ್ದೇಶಕ್ಕಾಗಿ ಭೂಮಿ ಮಾರ್ಪಾಡು ಮಾಡಲು ಸುದೀರ್ಘ ಕಾರ್ಯ ವಿಧಾನಗಳ ಕಾರಣ ಪವನ ವಿದ್ಯುತ್ ಯೋಜನೆಗಳನ್ನು ಅನುಷ್ಠಾನಗೊಳಿಸಲು ಪ್ರಮುಖ ಅಡಚಣೆಯಾಗುತ್ತಿದೆ.

3. ಬಯೋಮಾಸ್ ಮತ್ತು ಸಹ ವಿದ್ಯುತ್ ಯೋಜನೆಗಳಿಗೆ ಆಧಾರ ವಾಗಿರುವ ಕಚ್ಚಾ ವಸ್ತುಗಳ ಕೊರತೆ, ಬೆಲೆ ಏರಿಕೆಯಿಂದಾಗಿ ಅಭಿವೃದ್ಧಿದಾರರು ಇದರ ಬಗ್ಗೆ ನಿರಾಸಕ್ತಿ ತೋರಿರುತ್ತಾರೆ.

(ಇ) ಸೌರ ವಿದ್ಯುತ್ ಘಟಕಗಳ ಸ್ಥಾಪನೆಗೆ ಸಂಬಂಧಿಸಿದಂತೆ ನೂತನ ಸೌರ ನೀತಿ 2014–21ಅನ್ನು ಸರ್ಕಾರವು ದಿನಾಂಕ: 22.05.2014 ರಂದು ಹೊರಡಿಸಿದೆ.

ಇತರೆ ನವೀಕರಿಸಬಹುದಾದ ಇಂಧನ ಮೂಲಗಳ ಕಾರ್ಯ ನೀತಿ 2014–2020 ಅನ್ನು ಹೊರಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.